ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 1, March-April 2025, Pp. 94-99
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಸರ್ವಜ್ಞನ ತ್ರಿಪದಿಗಳಲ್ಲಿ ಸಾಮಾಜಿಕ ಪ್ರಜ್ಞೆ

**ಡಾ. ಮೀನಾಕ್ಷಿ**
ಕನ್ನಡ ಸಹಾಯಕ ಪ್ರಾಧ್ಯಾಪಕರು, ಎನ್.ಎಸ್.ಬಿ ಅಕಾಡೆಮಿ, ಬೆಂಗಳೂರು.

**Abstract:**
*ಸರ್ವಜ್ಞ ಕನ್ನಡದ ತ್ರಿಪದಿ ಸಾಹಿತ್ಯದ ಪ್ರಮುಖ ಕವಿಯಾಗಿದ್ದಾರೆ. ತ್ರಿಪದಿಗಳೆಂಬ ಮೂರು ಸಾಲಿನ ವಚನಗಳನ್ನು ರಚಿಸಿರುವ ಸರ್ವಜ್ಞನ ಕಾಲದ ಬಗ್ಗೆ ಹೆಚ್ಚಿನ ಮಾಹಿತಿ ಲಭ್ಯವಿಲ್ಲದಿದ್ದರೂ ಸಾಹಿತಿಗಳು ಮತ್ತು ಭಾಷಾ ಪ್ರಯೋಗದ ಲಕ್ಷಣಗಳ ಅಧ್ಯಯನದಿಂದ ಸುಮಾರು 16ನೇ ಶತಮಾನದ ಆದಿಭಾಗದಲ್ಲಿರಬಹುದು ಎಂದು ಪ್ರತಿಪಾದಿಸಲಾಗಿದೆ. ಕುಂಬಾರ ಮಾಳೆ ಮತ್ತು ಬಸವರಸ ಇವರ ತಾಯಿ ತಂದೆಯಾಗಿದ್ದು, ಇವರು ಪ್ರೀತಿಯಿಂದ ಪುಷ್ಪದತ್ತ ಎಂದು ನಾಮಕರಣ ಮಾಡಿದ್ದಾರೆ. ಸರ್ವಜ್ಞನ ತಾಯಿ ಕುಂಬಾರ ಮಾಳೆಯಾದರೂ ಸಾಕಿ ಬೆಳೆಸಿದ್ದು ಮಲ್ಲಕ್ಕ. ಸರ್ವಜ್ಞ ಜನಿಸಿದ್ದು ಇಂದಿನ ಹಾವೇರಿ ಜಿಲ್ಲೆ ರಟ್ಟೀಹಳ್ಳಿ ತಾಲೂಕು ಅಂಬಲೂರ ಮಾಸೂರು. ಇದು ಈಗ ಸರ್ವಜ್ಞನ ಮಾಸೂರು ಎಂದೇ ಪ್ರಸಿದ್ಧಿ ಪಡೆದಿದೆ. ಪ್ರಸ್ತುತ ಲೇಖನದಲ್ಲಿ ಸರ್ವಜ್ಞನ ತ್ರಿಪದಿಗಳಲ್ಲಿ ಕಂಡುಬರುವ ಸಾಮಾಜಿಕ ಪ್ರಜ್ಞೆ ಕುರಿತು ಚರ್ಚಿಸಲಾಗಿದೆ.*

**Keywords:** *ಕನ್ನಡ ಸಾಹಿತ್ಯ, ವಚನ ಸಾಹಿತ್ಯ, ಸರ್ವಜ್ಞ, ವಚನಗಳು, ಸಾಮಾಜಿಕ ಪ್ರಜ್ಞೆ.*

**ಪೀಠಿಕೆ**

"ಸರ್ವಜ್ಞನೆಂಬುವನು ಗರ್ವದಿಂದಾವನೆ ಸರ್ವರೊಳಗೊಂದು ನುಡಿಗಲಿತು ವಿದ್ಯೆಯ ಪರ್ವತವೇ ಆದ ಸರ್ವಜ್ಞ"[1] ಎಂಬ ನುಡಿಯಂತೆ ಸರ್ವಜ್ಞ ಸರ್ವವನ್ನು ತಿಳಿದಿದ್ದಂತಹ ಜ್ಞಾನಿ. ಆ ಜ್ಞಾನಸುಧೆಯನ್ನು ಎಲ್ಲರಿಗೂ ಹಂಚಿದ ಕವಿಶ್ರೇಷ್ಠ. ಸು. 16ನೇ ಶತಮಾನದ ಸರ್ವಜ್ಞ ಸಮಾಜದ ಆಗು–ಹೋಗು, ನೋವು–ನಲಿವು, ನ್ಯಾಯ–ಅನ್ಯಾಯ, ರೀತಿ–ನೀತಿ ಎಲ್ಲವನ್ನು ಕೂಡ ತನ್ನ ತ್ರಿಪದಿಗಳ ಮೂಲಕ ವ್ಯಕ್ತಪಡಿಸಿದ್ದಾನೆ. ಆ ಕಾಲದ ಜನಜೀವನ, ಕೌಟುಂಬಿಕ ವ್ಯವಸ್ಥೆ, ರಾಜಕೀಯ ವ್ಯವಸ್ಥೆ, ಧಾರ್ಮಿಕ ವ್ಯವಸ್ಥೆ, ಸಾಮಾಜಿಕ ವ್ಯವಸ್ಥೆ, ಮುಂತಾದವುಗಳ ಪರಿಚಯದ ಜೊತೆಗೆ ಪ್ರಸ್ತುತಕ್ಕೆ ಅಗತ್ಯವಾದ ಹಲವಾರು ಅಂಶಗಳು ಸರ್ವಜ್ಞನ ಮೂಲಕ ಗೋಚರವಾಗುತ್ತವೆ.

ಸಮಾಜದ ಪ್ರತಿಯೊಂದು ವಿಷಯವು ಕಣ್ಣಿಗೆ ಕಾಣುವಂತಿರುತ್ತದೆ, ಆದರೆ ಪ್ರಜ್ಞೆ ಎನ್ನುವುದು ಆಂತರಿಕವಾಗಿ ಗೋಚರವಾಗುವ ಕ್ರಿಯೆ. ಅದು ಜನರ ಆಲೋಚನಾಲಹರಿಯಿಂದ ವಿವಿಧ ಸ್ವರೂಪವನ್ನು ಪಡೆದಿದೆ. ಹಲವಾರು ಮಹನೀಯರು ಸಾಮಾಜಿಕ ಪ್ರಜ್ಞೆಯನ್ನು ಬಿತ್ತಿ ಬೆಳೆಸಿದ್ದಾರೆ. ಅದರಲ್ಲಿ ಸರ್ವಜ್ಞನ ಜ್ಞಾನಧಾರೆಯು ಕೂಡ ಬಹುಮುಖ್ಯವಾದುದು.

***"ಜ್ಞಾನದಿಂದಲಿ ಇಹವು ಜ್ಞಾನದಿಂದಲಿ ಪರವು***
***ಜ್ಞಾನವಿಲ್ಲದಿದ್ದರೆ ಸಕಲವೂ ತನಗಿದ್ದು***
***ಹಾನಿ ಕಾಣಯ್ಯ, ಸರ್ವಜ್ಞ***

***Please cite this article as:*** *ಮೀನಾಕ್ಷಿ.* (2025). *ಸರ್ವಜ್ಞನ ತ್ರಿಪದಿಗಳಲ್ಲಿ ಸಾಮಾಜಿಕ ಪ್ರಜ್ಞೆ. ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್,* 4(1), 94–99

ಸರ್ವಜ್ಞನು ಈ ತ್ರಿಪದಿಯಲ್ಲಿ ಜ್ಞಾನದಿಂದಲೆ ಈ ಲೋಕದಲ್ಲಿ ಸುಖ ಪ್ರಾಪ್ತಿಯಾಗುತ್ತದೆ ಮತ್ತು ಜ್ಞಾನದಿಂದಲೇ ಪರಲೋಕದಲ್ಲಿ ಮುಕ್ತಿಯನ್ನು ಪಡೆಯಲು ಸಾಧ್ಯ. ಅಂತಹ ಜ್ಞಾನವಿಲ್ಲದಿದ್ದರೆ ತಮ್ಮ ಬಳಿ ಇರುವ ಸಕಲ ಸಂಪತ್ತು ಕೂಡ ವ್ಯರ್ಥ ಎಂದು ಹೇಳಿದ್ದಾನೆ. ಇಲ್ಲಿ "ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯ"[3] ಎಂಬ ಬಸವಣ್ಣನವರ ವಚನವನ್ನು ನೆನೆಯಬಹುದು. ಯಾವುದೆ ಕಾಲವಾದರೂ ಜ್ಞಾನಕ್ಕೆ ನೀಡಿರುವ ಪ್ರಾಶಸ್ತ್ಯ ಬಹುಮುಖ್ಯವಾದುದು. ಎಲ್ಲಾ ದಾರ್ಶನಿಕರು ಸಹ ಜ್ಞಾನವನ್ನು ಪಡೆದವರಾಗಿದ್ದು, ಅದನ್ನು ಮುಂದಿನ ಪೀಳಿಗೆಗೆ ಬಳುವಳಿಯಾಗಿ ನೀಡಿ ಹೋಗಿದ್ದಾರೆ. ಪ್ರತಿಯೊಬ್ಬರು ಅದನ್ನು ಅರ್ಥೈಸಿಕೊಂಡು ಪ್ರಜ್ಞಾವಂತರಾಗಬೇಕಾದ ಅಗತ್ಯತೆ ಇದೆ.

ಉತ್ತಮ ಕುಲದಲ್ಲಿ ಜನಿಸಿದ ಮಾತ್ರಕ್ಕೆ ಉತ್ತಮರಾಗುವುದಿಲ್ಲ. ಯಾರು ಸತ್ಯ ಧರ್ಮ, ನ್ಯಾಯ ನೀತಿ, ನಡೆ ನುಡಿಯಲ್ಲಿ ಸನ್ಮಾರ್ಗವನ್ನು ಅನುಸರಿಸುತ್ತಾರೋ ಅವರೇ ಉತ್ತಮರು. ಧಾರ್ಮಿಕ ಲಾಂಛನವನ್ನು ಧರಿಸಿದರಷ್ಟೇ ಸಾಲದು ಮನಸ್ಸಿನ ಶುದ್ಧಿ, ಸನ್ನಡತೆಯೇ ಮುಖ್ಯವಾದುದು ಎಂಬುದು ಸರ್ವಜ್ಞನ ತ್ರಿಪದಿಗಳಲ್ಲಿ ಮೂಡಿಬಂದಿದೆ. ಸರ್ವಜ್ಞನಿಗೆ ತನ್ನ ಕಾಲಘಟ್ಟದಲ್ಲಿ, ಸಮಾಜದಲ್ಲಿ ಇದ್ದಂತಹ ಮೇಲು ಕೀಳು ಭಾವನೆ, ತಾನೇ ಶ್ರೇಷ್ಠ, ಇತರರು ಕನಿಷ್ಠ ಎಂಬ ಮನೋಭಾವದ ಬಗ್ಗೆ ವಿರೋಧವಿತ್ತು.

***"ಉತ್ತಮರು ಎಂಬುವರು ಸತ್ಯದಲಿ ತಡೆದಿಹರು***
***ಉತ್ತಮರಧಮರೆನಬೇಡ ಅವರೊಂದು***
***ಮುತ್ತಿನಂತಿಹರು ಸರ್ವಜ್ಞ"***[4]

ಉತ್ತಮರು ಮತ್ತು ಅಧಮರ ನಡುವೆ ಇರುವ ವ್ಯತ್ಯಾಸವನ್ನು ಇಲ್ಲಿ ಕಾಣಬಹುದು. ಉತ್ತಮರಾದವರು ಎಂಥದ್ದೇ ಕಠೋರ ಪರಿಸ್ಥಿತಿ ಎದುರಾದರೂ ಸತ್ಯದ ಮಾರ್ಗದಲ್ಲಿಯೇ ನಡೆಯುತ್ತಾರೆ. ಹೀಗೆ ನಡೆಯುವಾಗ ಜನರ ಜೊತೆ ನಿಷ್ಠುರವಾಗುವ ಪರಿಸ್ಥಿತಿ ಉಂಟಾಗುತ್ತದೆ. ಹಾಗೆಂದ ಮಾತ್ರಕ್ಕೆ ಅವರನ್ನು ಅಧಮರೆಂದು ಹೇಳಲು ಸಾಧ್ಯವಿಲ್ಲ. ಅವರು ಮೌಲ್ಯಯುತರಾದವರು, ನವರತ್ನದಲ್ಲಿನ ಮುತ್ತಿನಂತೆ ನೈಜವಾಗಿರುವವರು. ಎಂಬುದಾಗಿ ಹೇಳಿ ಉತ್ತಮರು ಮತ್ತು ಅಧಮರು ಯಾರೆಂಬುದಕ್ಕೆ ಕುಲವನ್ನು ಆಧಾರವಾಗಿಟ್ಟುಕೊಳ್ಳುವುದು ಸರಿಯಲ್ಲ ಎಂದು ವ್ಯಾಖ್ಯಾನಿಸಿದ್ದಾರೆ.

ಮಧ್ಯಯುಗದ ಸಂದರ್ಭದಲ್ಲಿ ಸಾಮಾಜಿಕ ಪರಿಸ್ಥಿತಿ ಉತ್ತಮವಾದುದಾಗಿರಲಿಲ್ಲ. ದೇವರು, ಧರ್ಮದ ಹೆಸರಿನಲ್ಲಿ ಹಲವಾರು ಮೌಢ್ಯದ ಆಚರಣೆಗಳು ಜನರನ್ನು ನಲುಗಿಸಿತ್ತು. ವರ್ಣಾಶ್ರಮ ವ್ಯವಸ್ಥೆ ಜಾರಿಯಲ್ಲಿತ್ತು ಶೋಷಣೆ ಎಂಬುದು ತಾಂಡವವಾಡುತಿತ್ತು. ಸ್ತ್ರೀಯರಿಗೆ ಯಾವುದೇ ರೀತಿಯ ಅವಕಾಶಗಳಿರಲಿಲ್ಲ. ಮನುಷ್ಯ–ಮನುಷ್ಯರ ನಡುವೆ ಭೇದಭಾವ ತಾಂಡವವಾಡುತಿತ್ತು. ಈ ಮಧ್ಯಯುಗದಲ್ಲೆ ನಡೆದಂತಹ ಕಲ್ಯಾಣಕ್ರಾಂತಿ ಯಿಂದಾಗಿ ಹಲವಾರು ಬದಲಾವಣೆಗಳುಂಟಾದವು. ಬಸವಣ್ಣನವರ ಮಾರ್ಗದರ್ಶನದಲ್ಲಿ ವಚನಕಾರರು ಅನುಭವಮಂಟಪವನ್ನು ಸ್ಥಾಪನೆಮಾಡಿ ಎಲ್ಲರೂ ಸಮಾನರು ಎಂಬ ತತ್ವವನ್ನು ಪ್ರತಿಪಾದಿಸಿದರು. ಇಷ್ಟೆಲ್ಲಾ ಚಳುವಳಿಗಳು ನಡೆದರೂ ತಾರತಮ್ಯವೆಂಬುದು ಸಂಪೂರ್ಣವಾಗಿ ಹೋಗಿರಲಿಲ್ಲ. ಸಾಕಷ್ಟು ಘರ್ಷಣೆಗಳು ನಡೆದವು. ಇದು ಸ್ವಸ್ಥ ಸಮಾಜಕ್ಕೆ ಹಿನ್ನಡೆಯನ್ನುಂಟುಮಾಡಿತು. ಸಮಾಜದ ಅಶಾಂತಿಗೆ ಕಾರಣವಾಯಿತು.

ಮನುಷ್ಯ ಎಷ್ಟೇ ಜ್ಞಾನ ಪಡೆದಿದ್ದರೂ ಸಮಾಜದ ತಾರತಮ್ಯವನ್ನು ಹೋಗಲಾಡಿಸಲು ಇನ್ನೂ ಪ್ರಯತ್ನಮಾಡುತ್ತಲೇ ಇರುವಂಥದ್ದನ್ನು ಕಾಣಬಹುದು. "ಇಪ್ಪತ್ತೊಂದನೇ ಶತಮಾನದಲ್ಲಿ ಬದುಕುತ್ತಿರುವ ನಾವು ಇಂದು ವೈಜ್ಞಾನಿಕವಾಗಿ ಬಹಳಷ್ಟು ಮುಂದುವರೆದಿದ್ದರು, ಈ ಜಾತಿಪದ್ಧತಿಯ ಅನಿಷ್ಟಗಳು ನಮ್ಮ ಸಮಾಜವನ್ನು ಕಾಡುತ್ತಿವೆ"[5] ಎಂಬ ಮಾತು ಇಂದಿನ ಸಮಾಜದ ಚಿತ್ರಣವನ್ನು ಅನಾವರಣಮಾಡುತ್ತದೆ. ಈ ಜಾತಿ ಪದ್ಧತಿ

ಅಂಟುರೋಗದ ಹಾಗೆ ಕಾಡುತ್ತಲೇ ಇದೆ. ಇವತ್ತಿಗೂ ಜೀವಂತವಾಗಿ ಉಳಿದಿರುವ ಸಮಸ್ಯೆಗಳಲ್ಲಿ ಇದು ಪ್ರಮುಖವಾದುದು.

ವರ್ಗತಾರತಮ್ಯದ ವಿಚಾರವನ್ನು ಪಂಪನಾದಿಯಾಗಿ ವಚನಕಾರರು, ದಾಸರು ವಿರೋಧಿಸಿದರಾದರೂ ಸಮಾಜ ಇದರಿಂದ ಹೊರಬರಲು ಸಾಧ್ಯವಾಗಿಲ್ಲ. ಸರ್ವಜ್ಞನು ತನ್ನ ತ್ರಿಪದಿಗಳಲ್ಲಿ ಸಮಾಜದ ಈ ತಾರತಮ್ಯವನ್ನು ಹೋಗಲಾಡಿಸಲು ಸಾಕಷ್ಟು ವಿಚಾರಗಳನ್ನು ಪ್ರಸ್ತಾಪಿಸಿದ್ದಾನೆ.

***"ನಡೆವುದೊಂದೇ ಭೂಮಿ ಕುಡಿವುದೊಂದೇ ನೀರು***
***ಸುಡುವಗ್ನಿಯೊಂದೆ ಇರುತಿರಲು ಕುಲಗೋತ್ರ***
***ನಡುವೆ ಎತ್ತಣದು ಸರ್ವಜ್ಞ"***[6]

ಸಕಲ ಚರಾಚರಗಳೆಲ್ಲವೂ ಭೂಮಿಯನ್ನೆ ಆಶ್ರಯಿಸಿವೆ. ಇದರಲ್ಲಿ ಯಾವ ರೀತಿಯ ಭೇದವನ್ನು ಕಾಣಲು ಸಾಧ್ಯವಿಲ್ಲ. ಎಲ್ಲರು ಬಳಸುತ್ತಿರುವ ಗಾಳಿ, ನೀರು, ಬೆಂಕಿ, ಬೆಳಕು ಎಲ್ಲವೂ ಒಂದೆ. ಪ್ರಕೃತಿ ಭೇದಭಾವಮಾಡದೆ ಸರ್ವರಿಗೂ ಸಮಾನವಾದ ರೀತಿಯಲ್ಲಿ ಎಲ್ಲವನ್ನು ಒದಗಿಸುತ್ತಿದೆ. ಹೀಗಿರುವಾಗ ಮನುಷ್ಯರಾದ ನಾವು ಎಲ್ಲದರಲ್ಲೂ ಅಸಮಾನತೆಯನ್ನುಂಟು ಮಾಡುತಿದ್ದೇವೆ. **"**ವಿಪರ್ಯಾಸವೆಂದರೆ ಪ್ರಕೃತಿಯ ಮುಂದೆ ಏನು ಅಲ್ಲದ ಮಾನವ ಜಾತಿ, ಕುಲಗೋತ್ರದ ಹಂದಿ ಬಲೆಯಲ್ಲಿ ಬಿದ್ದು ನರಳಾಡುತಿದ್ದಾನೆ**"**[7] ಎಂಬ ಮಾತು ಅರ್ಥಗರ್ಭಿತವಾದುದು. ನಾವೆಲ್ಲರು ಪ್ರಕೃತಿಯ ಕೂಸು, ಎಲ್ಲವನ್ನು ಪ್ರಕೃತಿಯಿಂದಲೇ ಪಡೆಯುತಿದ್ದೇವೆ. ಆದರೂ ಪ್ರಕೃತಿಗಿಲ್ಲದ ಈ ತಾರತಮ್ಯ ನೀತಿ ಮಾನವ ಕುಲವನ್ನೇ ಸರ್ವನಾಶ ಮಾಡುತ್ತಿದೆ. ಇನ್ನಾದರೂ ಮಾನವ ತನ್ನ ಸಂಕುಚಿತ ಮನೋಭಾವದಿಂದ ಹೊರಬರಬೇಕಾಗಿದೆ. ಈ ತ್ರಿಪದಿ ಇಂತಹ ಮಹತ್ವದ ಅಂಶಗಳನ್ನು ಸಾದರಪಡಿಸಿದೆ.

***"ಜಾತಿಹೀನನ ಮನೆಯ ಜ್ಯೋತಿ ತಾ ಹೀನವೇ?***
***ಜಾತಿ ವಿಜಾತಿಯೆನಬೇಡ, ದೇವನೊಲಿ***
***ದಾತನೇ ಜಾತ ಸರ್ವಜ್ಞ"***[8]

ದೀಪದ ಬೆಳಕು ಎಲ್ಲಾ ಕಡೆಯೂ ಪ್ರಕಾಶಮಾನವಾಗಿರುತ್ತದೆ. ಆ ದೀಪಕ್ಕೆ ಉತ್ತಮಕುಲದ ಮನೆಯಲ್ಲಿ ಮಾತ್ರವೇ ಬೆಳಗಬೇಕೆಂಬ ಯಾವ ಇರಾದೆಯು ಇರುವುದಿಲ್ಲ. ದೀಪವು ದೇವರ ಸನ್ನಿಧಿಯಲ್ಲಿ ಬೆಳಗುವಂತೆ ಸರ್ವರ ಮನೆಯಲ್ಲೂ ಜ್ಯೋತಿ ಉರಿಯುತ್ತದೆ. ಇಂತಹ ಉತ್ತಮ ಉದಾಹರಣೆಯನ್ನು ನೀಡುವ ಮೂಲಕ ಸದ್ಗುಣಗಳಿಂದ ಯಾರು ನಡೆದುಕೊಳ್ಳುತ್ತಾರೋ ಅವರು ದೇವರಿಗೆ ಪ್ರಿಯರಾಗಿರುತ್ತಾರೆ. ಹಾಗಾಗಿ ಕೇವಲ ಜಾತಿಯೊಂದೆ ಎಲ್ಲದಕ್ಕೂ ಮಾನದಂಡವಲ್ಲ ಎಂಬುದನ್ನು ಸರ್ವಜ್ಞ ಇಲ್ಲಿ ತಿಳಿಸಿದ್ದಾರೆ.

ಸರ್ವಜ್ಞನಿಗೆ ಕೃಷಿಯ ಬಗ್ಗೆ ಸಾಕಷ್ಟು ಒಲವಿತ್ತು. ಬೇಸಾಯಗಾರರೆಂದರೆ ಅಚ್ಚುಮೆಚ್ಚು. ಸಮಾಜದ ಪ್ರತಿಯೊಂದು ಜೀವಿಯು ಉಳಿದಿರುವುದು ಆಹಾರದಿಂದಲೇ. ಆದರೆ ಇತ್ತೀಚಿನ ದಿನಗಳಲ್ಲಿ ಕೃಷಿಗಾಗಲಿ, ಕೃಷಿಕರಿಗಾಗಲಿ ಆಗುತ್ತಿರುವ ಅನ್ಯಾಯ ಖಂಡನೀಯವಾದುದು. ಪ್ರತಿಯೊಬ್ಬರು ಶ್ರಮವಹಿಸಿ ಕಾಯಕದಲ್ಲಿ ನಿರತರಾಗಿರುವುದು ಬಹಳ ಮುಖ್ಯ. ಅಂತಹ ಶ್ರಮಿಕ ವರ್ಗವೆಂದರೆ ಅದು ರೈತರು.

***"ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು***
***ಮೇಟಿಯಿಂ ರಾಟಿ ನಡೆದುದಲ್ಲದೆ ದೇಶ***
***ದಾಟದೆ ಕೆಡುಗು ಸರ್ವಜ್ಞ"***[9]

ಸರ್ವಜ್ಞನ ಈ ಮಾತುಗಳು ಸಕಲ ಜೀವಾತ್ಮರ ಹಸಿವನ್ನು ನೀಗಿಸುವುದಕ್ಕಾಗಿ ದವಸ–ಧಾನ್ಯವನ್ನು ಬೆಳೆಯುವಂತಹ ರೈತರ ಕೃಷಿ ವಿದ್ಯೆಯೆ ಶ್ರೇಷ್ಠ ಎಂಬುದನ್ನು ತಿಳಿಸುತ್ತದೆ. ಹಾಗೆಯೆ ಕೋಟಿ ತರಹದ ವಿದ್ಯೆಗಳಿದ್ದರೂ ಮೇಟಿ (ಕೃಷಿ) ವಿದ್ಯೆಯೆ ಉತ್ತಮವಾದುದು. ಇದರಿಂದ ದೇಶ ನಡೆಯುತ್ತಿದೆ, ಇದಿಲ್ಲದಿದ್ದರೆ ಎಲ್ಲಾ ಚಟುವಟಿಕೆಗಳು ತಟಸ್ಥವಾಗುತ್ತವೆ ಎಂದು ಹೇಳುವ ಮೂಲಕ

ಕೃಷಿಯ ಮತ್ತು ಕೃಷಿಕನ ಮಹತ್ವವನ್ನು ಎತ್ತಿಹಿಡಿದಿದ್ದಾನೆ. ಜೊತೆಗೆ ಆಹಾರದ ಮಹತ್ವ ಮತ್ತು ಆರೋಗ್ಯದ ಬಗ್ಗೆಯೂ ಸರ್ವಜ್ಞನ ತ್ರಿಪದಿಗಳಿವೆ. ಹಸಿವಿದ್ದಾಗ ಮಾತ್ರವೇ ಊಟ ಮಾಡಬೇಕು, ಹಸಿದಿದ್ದರೂ ಊಟ ಮಾಡದೆಯು ಇರಬಾರದು, ಹಾಗೆಯೆ ಹೆಚ್ಚು ಊಟ ಮಾಡುವವರು 'ಸದಾರೋಗಿ' ಎಂದು ಸಂಬೋಧಿಸಿ ಆಹಾರದ ಕ್ರಮದ ಬಗ್ಗೆ ಸಾಕಷ್ಟು ವಿಚಾರಗಳನ್ನು ತಿಳಿಸಿದ್ದಾನೆ.

ವಿದ್ಯೆಯುಳ್ಳವನು ಹಾರಾಡುವ ಹದ್ದಿನಂತೆ. ಯಾವ ಪ್ರದೇಶದಲ್ಲಿ ತನಗೆ ಆಹಾರ ಸಿಗುವುದೆಂದು ಹದ್ದು ಹಾರುತ್ತಲೇ ಕಂಡುಕೊಳ್ಳುವ ಹಾಗೆ ವಿದ್ಯಾವಂತರು ಸಹ ತನ್ನ ಜೀವನವನ್ನು ಎಲ್ಲಿದ್ದರೂ ಸುಖಕರವಾಗಿರುವಂತೆ ನೋಡಿಕೊಳ್ಳುತ್ತಾರೆ.

***"ವಿದ್ಯೆ ಉಳ್ಳವನ ಮುಖವು ಮುದ್ದುಬರುವಂತಿಕ್ಕು***
***ವಿದ್ಯೆಯಿಲ್ಲದವನ ಬರಿ ಮುಖವು ಹಾಳೂರ***
***ಹದ್ದಿನಂತಿಕ್ಕು ಸರ್ವಜ್ಞ"***[10]

ವಿದ್ಯೆ ಉಳ್ಳವನ ಮುಖ ಮುದ್ದುಮುದ್ದಾಗಿ ಕಾಣುತ್ತದೆ, ವಿದ್ಯೆಯಿಲ್ಲದವನ ಬರಿ ಮುಖವು ಹಾಳೂರಿನಂತೆ ಬಣಗುಡುತ್ತಲಿರುತ್ತದೆ. ವಿದ್ಯೆ ಇಲ್ಲದಿರುವುದು ಏನೂ ಇಲ್ಲದಿರುವ ಪರಿಸ್ಥಿತಿಯ ಚಿತ್ರಣವಾಗಿದೆ. ನಮಗೆ ಸಂಪತ್ತು ಬರಬಹುದು ಅಥವಾ ಹೋಗಬಹುದು, ಕಳ್ಳರು ಅಪಹರಿಸಬಹುದು, ಸಂಬಂಧಿಗಳು ಪಾಲು ಕೇಳಬಹುದು, ಆದರೆ ವಿದ್ಯೆಯನ್ನು ಯಾರಿಂದಲೂ ಕಸಿಯಲು ಸಾಧ್ಯವಿಲ್ಲವೆಂಬುದು ಸರ್ವಜ್ಞನ ಉಕ್ತಿ. ವಿದ್ಯೆಯನ್ನು ಹಂಚಬಹುದು, ಹಂಚಿದಷ್ಟು ಜ್ಞಾನ ವಿಸ್ತಾರವಾಗುತ್ತಾ ಸಾಗುತ್ತದೆ. ಆದರೆ ಕದಿಯಲು ಅಸಾಧ್ಯ. ಹಾಗೆಯೆ ಓದು ಎಂಬುದು ಆಳವಾದುದಾಗಿರಬೇಕು, ಓದಿದ್ದು ಕಬ್ಬಿನ ಸಿಪ್ಪೆಯಾದರೆ, ಆಳವಾದ ಓದು ಸಿಪ್ಪೆಯೇ ಕಬ್ಬಾದಂತೆ ಎಂಬ ದೃಷ್ಟಾಂತವನ್ನು ಉದಾಹರಣೆಯಾಗಿ ತಿಳಿಸಿದ್ದಾನೆ.

ಹಣದ ಬಗ್ಗೆ ಸರ್ವಜ್ಞನ ತ್ರಿಪದಿಗಳು ಗಮನ ಸೆಳೆಯುತ್ತವೆ. ಹಣವೊಂದಿದ್ದರೆ ಪ್ರಪಂಚವನ್ನೇ ಗೆಲ್ಲಬಹುದು, ಆದರೆ ಹಣದ ಮದವಿದ್ದರೆ ಪ್ರಪಂಚವನ್ನೇ ಕಳೆದುಕೊಳ್ಳಬಹುದು. ಸರಿಯಾದ ಮಾರ್ಗದಲ್ಲಿ ಹಣಗಳಿಕೆಮಾಡುವುದು ಮುಖ್ಯ, ಸಂಬಂಧಗಳನ್ನು ಹತ್ತಿರ ತರುವುದು ಮತ್ತು ದೂರ ತಳ್ಳುವುದು ಈ ಹಣವೇ. ಹೆಂಡತಿ, ಮಕ್ಕಳೆಲ್ಲರು ಮಮತೆ ತೋರಿಸುವುದು ಸಂಪತ್ತಿರುವವರೆಗೆ ಮಾತ್ರ. ಸಂಪತ್ತು ಮರೆಯಾದ ಮರುದಿನವೇ ಅವರು ಜೊತೆಯಲ್ಲಿರುವುದಿಲ್ಲ ಎಂದು ಹೇಳಿದ್ದಾನೆ. ಹಾಗೆಯೆ ಹಣ ಇರುವವರು ತಪ್ಪನ್ನು ನುಡಿದರು ಸಹ ಜಗತ್ತು ಅದಕ್ಕೆ ದೂಷಣೆ ಮಾಡುವುದಿಲ್ಲ. ಆದರೆ ಬಡವನಾದವನು ಏನಾದರು ಹೇಳಿದರೆ ಅದು ತಪ್ಪಾಗಿಯೇ ಕಾಣಿಸುತ್ತದೆ.

***"ಉಳ್ಳವರು ನುಡಿದಿಹರೆ ಬೆನ್ನ ಹಿಂದಕ್ಕೆ ಇರಿಸಿ***
***ಇಲ್ಲದ ಬಡವ ನುಡಿದರೆ ಜಗವೆಲ್ಲಾ***
***ಮುಂಡಾಡುತಿಹುದು ಸರ್ವಜ್ಞ"***[11]

ಈ ಮೇಲಿನ ತ್ರಿಪದಿಯು ಉಳ್ಳವರ ಮತ್ತು ಬಡವರ ನಡುವಿನ ತಾರತಮ್ಯವನ್ನು ಸಾದರಪಡಿಸುತ್ತದೆ. ಈ ಹಣವೆಂಬುದು ಹೀಗೆ ಪ್ರತಿಯೊಬ್ಬರಲ್ಲೂ, ಪ್ರತಿಯೊಂದರಲ್ಲೂ ಭಾಗಿಯಾಗಿ ಜೀವನವನ್ನು ಹೇಗೆ ಮಾರ್ಪಡಿಸುತ್ತದೆ ಎಂಬುದು ತಿಳಿಯುತ್ತದೆ. ಹಾಗೆಯೆ ಈ ಹಣವನ್ನು ಸಾಲವಾಗಿ ಪಡೆದವರು, ಕೊಟ್ಟವರ ಬಗ್ಗೆಯೂ ಸರ್ವಜ್ಞ ಹಲವಾರು ವಿಷಯವನ್ನು ತಿಳಿಸಿದ್ದಾನೆ. ಸಾಲ ಇಲ್ಲದಿರುವ ಮನೆಯೇ ಉತ್ತಮ, ಹಾಲು ಅನ್ನದಂತೆ, ಬಾಲಕರ ಲೀಲೆಯಂತೆ, ಕೊರಳಿನ ಮಾಲೆಯಂತೆ, ಶೋಭೆಯಿಂದ ಕೂಡಿರುತ್ತದೆ. ಅದೇ ಸಾಲವನ್ನು ತರುವಾಗಲು ಹಾಲು ಅನ್ನದಂತೆ ಸೊಗಸಾಗಿರುತ್ತದೆ. ಆದರೆ ಆ ಸಾಲವನ್ನು ನೀಡಿದಾತ ಬಂದು ಹಣ ಕೇಳಿದರೆ ಚೇಳು ಕುಟುಕಿದಂತಾಗುತ್ತದೆ, ಕಿಬ್ಬದಿಯ ಕೀಲು ಮುರಿದಂತೆ ಬಾಧೆಯಾಗುತ್ತದೆ. ಮಾನಹಾನಿಯಾಗಿ ಅವಹೇಳನಕ್ಕೆ ಗುರಿಯಾಗಬೇಕಾದ ಸಂದರ್ಭ ಬರುತ್ತದೆ.

'ಋಣವೆಂಬ ಪಾತಕವು ಬಹುಬಾಧೆಪಡಿಸುತಿದೆ' ಎಂಬ ಪುರಂದರದಾಸರ ಉಕ್ತಿಯಂತೆ ಈ ಸಾಲದ ಋಣ ಜನ್ಮ ಜನ್ಮಾಂತರಕ್ಕೂ ಕಾಡುವಂತಹುದಾಗಿದೆ. ದೈಹಿಕವಾಗಿ ಮತ್ತು ಮಾನಸಿಕವಾಗಿ ಹಿಂಸೆಗೊಳಗಾಗಬೇಕಾದ ಸಂದರ್ಭ ಎದುರಿಸಬೇಕಾಗುತ್ತದೆ ಎಂಬುದು ಇವರ ನಿಲುವಾಗಿದೆ.

'ಮಾತೇ ಮುತ್ತು ಮಾತೇ ಮೃತ್ಯು' ಎಂಬ ಮಾತಿನಂತೆ ಮಾತು ತುಂಬಾ ಅಮೂಲ್ಯವಾದುದು. ಮಾತಿನ ಮೂಲಕ ಹಲವು ಜನರ ಮನಸ್ಸನ್ನು ಗೆಲ್ಲಬಹುದು, ಮಾತಿನ ಮೂಲಕ ಹಲವು ಜನರ ಮನಸನ್ನು ನೋಯಿಸಲುಬಹುದು. ಅವರನ್ನು ಕಳೆದುಕೊಳ್ಳಲು ಸಹ ಮಾತೇ ಕಾರಣವಾಗುತ್ತದೆ. ಮಾತು ಸರಿಯಿಲ್ಲದಿದ್ದರೆ ದ್ವೇಷ, ಅಸೂಯೆ, ಕೋಪತಾಪಗಳನ್ನು ಉಂಟುಮಾಡುತ್ತದೆ. ಹಾಗೆಯೆ ಹಲವಾರು ಜನರ ಜೀವ–ಜೀವನವನ್ನು ನಾಶಮಾಡುತ್ತಿದೆ.

***"ರಸಿಕನಾಡಿದ ಮಾತು ಶಶಿಯುದಿಸಿ ಬಂದಂತೆ***
***ರಸಿಕನಲ್ಲದವನ ಬರಿ ಮಾತು ಕಿವಿಗೆ ಕೂರ್***
***ದಸಿಯು ಬಡಿದಂತೆ ಸರ್ವಜ್ಞ"***[12]

'ಮಾತೆಂಬುದು ಜ್ಯೋತಿರ್ಲಿಂಗ' ಎಂಬ ಅಲ್ಲಮಪ್ರಭುವಿನ ಉಕ್ತಿಯಂತೆ, ಮಾತು ಎಲ್ಲೆಡೆ ಬೆಳಕನ್ನು ತರುವಂತಿರಬೇಕು. ಸರ್ವಜ್ಞ ಹೇಳಿರುವಂತೆ ಚಂದ್ರೋದಯವಾದಾಗ ಎಷ್ಟು ಸಂತೋಷವಾಗುತ್ತದೊ ಅಷ್ಟು ಹಿತಕರವಾಗಿರಬೇಕು, ಅಪ್ಯಾಯಮಾನವಾಗಿರಬೇಕು, ಕಿವಿಗೆ ಗೂಟ ಹೊಡೆಯುವಾಗ ನೋವಾಗುವ ರೀತಿ ಸಂಕಷ್ಟವನ್ನು ಉಂಟುಮಾಡಬಾರದು ಎಂದು ಹೇಳಿದ್ದಾನೆ.

ಈ ಮಾತಿನಿಂದ ಎಲ್ಲರನ್ನು ಮೆಚ್ಚಿಸಲು ಸಾಧ್ಯವಾಗದಿರಬಹುದು ಆದರೆ ಸಜ್ಜನರ ಸ್ನೇಹವನ್ನು ಸಂಪಾದಿಸಬಹುದು. ಸಜ್ಜನ ಮತ್ತು ದುರ್ಜನರ ಸಂಗ ಹೇಗಿರುತ್ತದೆ ಎಂಬುದನ್ನೂ ಸರ್ವಜ್ಞ ತಿಳಿಸಿದ್ದಾರೆ.

***"ಉರಗನ ಹಲ್ಲು ನಂಜು ಸುರಿಗೆಯ ಮೊನೆ***
***ನಂಜು ಕರುಣವಿಲ್ಲದವನ ನುಡಿನಂಜು, ದುರ್ಜನರ***
***ಇರವೆಲ್ಲ ನಂಜು ಸರ್ವಜ್ಞ"***[13]

ಹಾವಿನ ಹಲ್ಲಿನಲ್ಲಿ ವಿಷವಿರುವಂತೆ, ಕತ್ತಿಯ ತುದಿಯಲ್ಲಿ ದಯೆ ಇಲ್ಲದಿರುವಂತೆ, ದುರ್ಜನರು ಇರುವಲ್ಲಿ ಹಾಗೂ ದುರ್ಜನರ ಇಡೀ ಜೀವನ ನಂಜಿನಿಂದ ಕೂಡಿರುತ್ತದೆ. ಅವರಿಂದ ದೂರ ಇರುವುದೆ ಒಳ್ಳೆಯದು. ಅದೆ ಸಜ್ಜನರ ಸಹವಾಸ ಜೇನಿನಂತೆ ಸಿಹಿಯಾದುದು ಎಂದು ಸರ್ವಜ್ಞ ಈ ತ್ರಿಪದಿಯಲ್ಲಿ ತಿಳಿಸಿದ್ದಾನೆ.

ಸರ್ವಜ್ಞನಿಗೆ ಸಮಾಜದ ಪ್ರತಿಯೊಂದು ವಿಚಾರದ ಬಗ್ಗೆಯೂ ಆಳವಾದ ಜ್ಞಾನವಿತ್ತು. ಆಡಳಿತದ ಬಗ್ಗೆ, ಆಳ್ವಿಕೆ ಮಾಡುವಂತಹ ರಾಜನ ಬಗ್ಗೆ ಸಾಕಷ್ಟು ವಿಚಾರಗಳನ್ನು ಚರ್ಚಿಸಿದ್ದಾನೆ. ಸಮಾಜದಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಆಳ್ವಿಕೆ ಮಾಡುವಂತಹ ಸ್ಥಾನದಲ್ಲಿರುವವರು ಭ್ರಷ್ಟರಾಗಿ ಜನರನ್ನು ಶೋಷಣೆ ಮಾಡುತಿದ್ದಾರೆ. ಹೀಗಿರುವಾಗ ಉತ್ತಮ ಸಮಾಜ ನಿರ್ಮಾಣ ಹೇಗೆ ಸಾಧ್ಯ? ಇದರ ಬಗ್ಗೆ ಧನಿ ಎತ್ತಿದ್ದಾನೆ.

***"ನಾಡೆಂಬ ದೇಹಕ್ಕೆ ರೂಢಿಪತಿಯೇ ಪ್ರಾಣ***
***ನಾಡಳಿಯರ ರೂಢಿಪತಿ ಕಡಗು ಅರಸಳಿಯೆ***
***ನಾಡೆಲ್ಲ ಕೆಡಗು ಸರ್ವಜ್ಞ"***[14]

ದೇಹ ಎಂಬುದು ನಾಡು, ಆ ನಾಡಿಗೆ ಪ್ರಾಣನಾಗಿರುವವನು ರಾಜನಾಗಿದ್ದಾನೆ. ಆ ಪ್ರಾಣ ಸರಿಯಾಗಿದ್ದರೆ, ನಾಡು ಉತ್ತಮವಾಗಿರುತ್ತದೆ. ಪ್ರಾಣವೇ ಹೋದರೆ ದೇಹ ಉಳಿಯಲು ಸಾಧ್ಯವೇ ಇಲ್ಲ ಹಾಗೆ ರಾಜನಾದವನು ಯೋಗ್ಯನಲ್ಲದೆ ಹೋದರೆ ರಾಜ್ಯ ಸುಭಿಕ್ಷವಾಗಿರಲು ಸಾಧ್ಯವಿಲ್ಲವೆಂದು ಹೇಳಿದ್ದಾನೆ.

ಹೀಗೆ ಸರ್ವಜ್ಞನ ತ್ರಿಪದಿಗಳು ಪ್ರಸ್ತುತ ಸಂಧರ್ಭದ ವಿಚಾರಗಳಿಗೆ ತಾಳೆಯಾಗುವ ರೀತಿಯಲ್ಲಿ ರಚಿತವಾಗಿವೆ. ಈ ತ್ರಿಪದಿಗಳು

ಸರ್ವಜ್ಞನಿಗಿದ್ದ ಪ್ರತಿಭೆಯನ್ನು ಅನಾವರಣ ಮಾಡುವುದರ ಜೊತೆಗೆ ಸಮಾಜದ ಬಗ್ಗೆ ಆತನಿಗಿದ್ದ ಪ್ರಜ್ಞೆಯನ್ನು ತಿಳಿಸುತ್ತವೆ.

**ಕೊನೆಟಿಪ್ಪಣಿಗಳು**

1. ನಾಗರಾಜ, ಸಿ. ಪಿ. *ಸರ್ವಜ್ಞನ ವಚನಗಳ ಓದು.* ಪುಟ. 100
2. ಚೆನ್ನಪ್ಪ ಉತ್ತಂಗಿ. (2011). *ಸರ್ವಜ್ಞನ ವಚನಗಳು.* ಪುಟ. 40
3. ವಚನ ಸಂಚಯ: ಸಮಗ್ರ ವಚನ ಸಂಪು, ವಚನ ಸಂಖ್ಯೆ: 842
4. *ಪೂರ್ವೋಕ್ತ–2.* ಪುಟ. 123
5. ರುದ್ರಮೂರ್ತಿಶಾಸ್ತ್ರೀ. (2009). *ಸರ್ವರ ಸರ್ವಜ್ಞ,* ಪುಟ. 42
6. *ಪೂರ್ವೋಕ್ತ–2.* ಪುಟ. 122
7. ಮಹಾಲಿಂಗಪ್ಪ, ಸೋ. ಕುಂಬಾರ. (2012). *ಸರ್ವಜ್ಞನ ವಚನಗಳಲ್ಲಿ ಲೋಕದೃಷ್ಟಿ.* ಪುಟ. 47
8. *ಪೂರ್ವೋಕ್ತ–2.* ಪುಟ. 122
9. *ಪೂರ್ವೋಕ್ತ–2.* ಪುಟ. 168
10. *ಪೂರ್ವೋಕ್ತ–2.* ಪುಟ. 163
11. ರಂಗಾಚಾರಿ. ಕೆ. (2011). *ಸರ್ವಜ್ಞನ ವಚನಗಳು.* ಪುಟ.66
12. *ಪೂರ್ವೋಕ್ತ–2.* ಪುಟ. 167
13. *ಪೂರ್ವೋಕ್ತ–2.* ಪುಟ. 103
14. *ಪೂರ್ವೋಕ್ತ–2.* ಪುಟ. 88

**ಪರಾಮರ್ಶನ ಗ್ರಂಥಗಳು**


- ಚೆನ್ನಪ್ಪ ಉತ್ತಂಗಿ. (2011). *ಸರ್ವಜ್ಞನ ವಚನಗಳು.* ಕನ್ನಡ ಸಾಹಿತ್ಯ ಪರಿಷತ್ತು.
- ಮಹಾಲಿಂಗಪ್ಪ, ಸೋ. ಕುಂಬಾರ.(2012). *ಸರ್ವಜ್ಞನ ವಚನಗಳಲ್ಲಿ ಲೋಕದೃಷ್ಟಿ.* ಶ್ರೀ ಅನ್ನಪೂರ್ಣ ಪಬ್ಲಿಷರ್ಸ್.
- ರಂಗಾಚಾರಿ. ಕೆ. (2011). *ಸರ್ವಜ್ಞನ ವಚನಗಳು.* ದಿವ್ಯಚಂದ್ರ ಪ್ರಕಾಶನ.
- ರುದ್ರಮೂರ್ತಿಶಾಸ್ತ್ರೀ. (2009). *ಸರ್ವರ ಸರ್ವಜ್ಞ,* ಸಾಗರ ಪ್ರಕಾಶನ.
- *ವಚನ ಸಂಚಯ: ಸಮಗ್ರ ವಚನಸಂಪುಟ*

  https://vachana.sanchaya.net/vachanas/?vachana=%E0%B2%9C%E0%B3%8D%E0%B2%9E%E0%B2%BE%E0%B2%A8%E0%B2%A6%20&search_type=like_search&vachanakaara=1